

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಮುಗಿಯದ 'ಭಾಗೀರಥಿ'ಯರ ಕಥೆ!

ನಿಮಗೊಂದು ಸಣ್ಣ ಪ್ರಶ್ನೆ. ತಟ್ಟನೆ ಉತ್ತರಿಸಬೇಕು. ನಿಮ್ಮ ಹೆಸರನ್ನು ಕೇಳಿದರೆ ಹೇಗೆ ಹೇಳುತ್ತೀರೋ ಹಾಗೆ. ಉತ್ತರಿಸಲಾಗದಿದ್ದರೆ ನಿಮ್ಮ ಮನೆಯಲ್ಲಿರುವ ಈಗಿನ ಪೀಳಿಗೆಯ ಮಕ್ಕಳನ್ನು ಕೇಳಿ. ಅವರು ನಿಮಗಿಂತ ಹೆಚ್ಚು ಬುದ್ಧಿವಂತರು. ನಿಮಗೆ ನಿಮ್ಮ ಮೊಬೈಲ್ ಅಥವಾ ಟೆಲಿವಿಷನ್ ಸೆಟ್ಟಿಂಗ್ಸ್ ಮಾಡಿಕೊಳ್ಳಲು ಬರುವುದಿಲ್ಲ. ಆಗ ನಿಮ್ಮ ಮನೆಯಲ್ಲಿರುವ ಚಿಕ್ಕಮಕ್ಕಳ ಸಹಾಯ ಪಡೆಯುತ್ತೀರಿ. ಆ ಮಕ್ಕಳು ನಿಮಗೆ ಅಚ್ಚರಿ ಮೂಡುವಂತೆ ಫಟಾಫಟ್ ಮಾಡಿ ಕೊಡುತ್ತಾರೆ. ಅಧುನಿಕ ತಂತ್ರಜ್ಞಾನದಲ್ಲಿ ಅವರು experts ಅಲ್ಲವೇ? ನೀವು ಎಷ್ಟೇ ಆಗಲಿ ಹಳೆಯ ಕಾಲದ ಜನ. ನಮ್ಮ ಕಾಲದಲ್ಲಿ ಇವೆಲ್ಲಾ ಇರಲಿಲ್ಲ ಎಂದು ಸಮಾಧಾನಪಟ್ಟುಕೊಳ್ಳುತ್ತೀರಿ. ಕಲಿಯುವ ವಯಸ್ಸಲ್ಲ ನೋಡಿ ಎಂದು ಸಮಜಾಯಿಷಿ ನೀಡುತ್ತೀರಿ. ಕಲಿಕೆಗೆ ವಯಸ್ಸೆಂಬುದಿಲ್ಲ. ಹೊಸದನ್ನು ಕಲಿಯಲು ನಿರಾಸಕ್ತಿ. ಇಲ್ಲವೇ ನಿಮ್ಮ ಮಕ್ಕಳ ಬುದ್ಧಿವಂತಿಕೆ ಬಗ್ಗೆ ನಿಮಗಿರುವ ಹೆಮ್ಮೆ. ವಿಚಾರ ಎಲ್ಲಿಂದ ಎಲ್ಲಿಗೋ ಹೋಯಿತು...

ಪ್ರಶ್ನೆ ಹೀಗಿದೆ: 'A' is the father of 'B'. But 'B' is not the son of 'A'. Then, who is 'B'?. A ಎಂಬ ವ್ಯಕ್ತಿ B ಎಂಬ ವ್ಯಕ್ತಿಯ ತಂದೆ. ಆದರೆ B ಎನ್ನುವ ವ್ಯಕ್ತಿ A ಎಂಬ ವ್ಯಕ್ತಿಯ ಮಗನಲ್ಲ. ಹಾಗಾದರೆ B ಯಾರು? A ಗೆ ಏನಾಗಬೇಕು? ನಮಗೆ ಗೊತ್ತು, ನೀವು ಉತ್ತರಿಸಲು ನಿಸ್ಸಂಶಯವಾಗಿಯೂ ತಡವರಿಸುತ್ತೀರಿ. B ಯ ತಂದೆ A ಆಗಿದ್ದರೆ B ಯು ಮಗನಾಗದೇ ಇರಲು ಹೇಗೆ ಸಾಧ್ಯ? ಎಂದು ತಲೆಕೆಡಿಸಿಕೊಳ್ಳುತ್ತೀರಿ. ಇದರಲ್ಲೇನೋ ಒಗಟು ಇದೆ ಎಂದು ಇಲ್ಲದ ಭ್ರಮೆಯನ್ನು ಮೂಡಿಸಿಕೊಳ್ಳುತ್ತೀರಿ. ತಂದೆ ಎನಿಸಿಕೊಳ್ಳಲು ಮಗನೇ ಆಗಬೇಕೆಂದೇನಿದೆ? ಮಗನಾಗದಿದ್ದರೆ ಮಗಳೂ ಆಗಿರಬಹುದಲ್ಲವೇ ಎಂಬ ಆಲೋಚನೆ ನಿಮಗೆ ಬರುವುದೇ ಇಲ್ಲ. ಇದಕ್ಕೆ ಕಾರಣವೇನು? ನಿಮ್ಮನ್ನೇ ನೀವು ಪ್ರಶ್ನೆ ಮಾಡಿಕೊಳ್ಳಿ. ಏಕೆಂದರೆ ಇದು ಪುರುಷ ಪ್ರಧಾನ ಸಮಾಜ. ಈ ಸಮಾಜದಲ್ಲಿ ಮಹಿಳೆಯರಿಗೆ ಸಮಾನ ಸ್ಥಾನಮಾನ ಇಲ್ಲ. ಹೀಗೆಂದು 60 ರ ದಶಕದಲ್ಲಿ ಕೂಗೆಬ್ಬಿಸಿದವರು ಅಮೇರಿಕಾದ ಸ್ತ್ರೀವಿಮೋಚನಾ ಚಳುವಳಿಯ (Women's Liberation Movement) ವಿಚಾರವಾದಿ ಮಹಿಳೆಯರು. "Equal work and Equal Pay" 'ಸಮಾನ ಕೆಲಸ, ಸಮಾನ ವೇತನ' ಎಂಬ ಹೋರಾಟ ಬ್ರಿಟನ್ ಮಹಿಳೆಯರಿಂದಲೂ ನಡೆಯಿತು. ಅವರ ಧರ್ಮಗ್ರಂಥವಾದ ಬೈಬಲ್‌ನಲ್ಲಿ ದೇವರನ್ನು 'ತಂದೆ' ಎಂದೇ ಏಕೆ ಕರೆಯಲಾಗಿದೆ, 'ತಾಯಿ' ಎಂದು ಏಕೆ ಕರೆಯಬಾರದು ಎಂದು ಅವರ ತಕರಾರು. ಅದು ಲಿಂಗದ ತಾರತಮ್ಯವನ್ನು ತೋರಿಸುತ್ತದೆಯಾದ್ದರಿಂದ ದೇವರನ್ನು ಕುರಿತು ಎಲ್ಲೆಲ್ಲಿ 'ತಂದೆ' ಎಂಬ ಶಬ್ದಪ್ರಯೋಗವಿದೆಯೋ ಅಲ್ಲೆಲ್ಲಾ 'ತಾಯಿ' ಎಂದೂ ಸಹ ಇರಬೇಕೆಂದು ಆಗ್ರಹಿಸತೊಡಗಿದರು. ಅದೇ ರೀತಿ 'ಅವನು' ಎನ್ನುವ ಕಡೆ 'ಅವಳು' ಎಂದೂ ಸೇರ್ಪಡೆಮಾಡಬೇಕೆಂದು ಅವರ ಹಟ.



ಅಮೇರಿಕೆ ಮತ್ತು ಬ್ರಿಟನ್ ದೇಶಗಳ ಮಹಿಳೆಯರಿಗೇನಾದರೂ ಕನ್ನಡ ಸಾಹಿತ್ಯದ ಪರಿಚಯವಿದ್ದಿದ್ದರೆ "ಹೆಣ್ಣು ಹೆಣ್ಣೆಂದೇಕೆ ಬೀಳುಗಳೆವಿರಿ ಕಣ್ಣು ಕಾಣದ ಗಾವಿಲರಿರಾ", "ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು" ಇತ್ಯಾದಿ ನುಡಿಗಟ್ಟುಗಳನ್ನು ತಮ್ಮ ಭಿತ್ತಿಪತ್ರಗಳಿಗೆ ಬಳಸಿಕೊಳ್ಳುತ್ತಿದ್ದರೋ ಏನೋ! ಸ್ತ್ರೀವಿಮೋಚನಾ ಚಳುವಳಿ ದೇವರನ್ನು ತಾಯಿ ಎಂದು ಕರೆಯುವಲ್ಲಿ ಯಶಸ್ವಿಯಾಗದಿದ್ದರೂ ಇಂಗ್ಲೀಷ್ ಭಾಷೆಯಲ್ಲಿ ದೈನಂದಿನ ಬಳಕೆಯಲ್ಲಿದ್ದ ಪುರುಷಸೂಚಕ ಪದಗಳನ್ನು ಪರಿಷ್ಕರಿಸುವಲ್ಲಿ ಯಶಸ್ಸನ್ನು ಕಂಡಿತು. ಉದಾಹರಣೆಗೆ ಆ ದೇಶದ ಸಭೆ-ಸಮಾರಂಭಗಳಲ್ಲಿ ಮಹಿಳೆಯರು ಅಧ್ಯಕ್ಷತೆ ವಹಿಸಿದರೆ ಈಗ Chairman ಎನ್ನುವಂತಿಲ್ಲ, Chairwoman ಎನ್ನಬೇಕು. ಅಪ್ಪಿತಪ್ಪಿ Chairman ಎಂದರೆ ಕ್ಷಮಾಯಾಚನೆ ಮಾಡಬೇಕಾಗುತ್ತದೆ. ಇತ್ತೀಚೆಗೆ ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಇವೆರಡೂ ಪದಗಳ ಜಾಗದಲ್ಲಿ ಲಿಂಗಸೂಚಕವಲ್ಲದ Chairperson ಎಂಬ ವಿನೂತನ ಪದ ಬಳಕೆಗೆ ಬಂದಿದೆ. ಆದರೂ Woman ಎಂಬ ಶಬ್ದ ಮಾತ್ರ ಮೊದಲಿನಂತೆ ಹಾಗೆಯೇ ಮುದುವರಿದಿದೆ. ಅದರಲ್ಲೂ man ಇದೆಯಲ್ಲಾ ಎಂದು ಹಂಗಿಸುವ ಪುರುಷರನ್ನು ಕಂಡು ನಾಡೋಜ ಪುಟ್ಟಪ್ಪನವರು ಆಗಾಗ್ಗೆ ಹೇಳುವಂತೆ ಅದು ಸಾಮಾನ್ಯ ಮಹಿಳಾಸೂಚಕ ಪದವಲ್ಲ 'ಡಬಲ್ ಯೂ ಓ ಮ್ಯಾನ್' (ಪುರುಷನಾದ ನಿನಗಿಂತ ಮಹಿಳೆ ಎರಡು ಪಟ್ಟು ಹೆಚ್ಚು) ಎಂದು ತಿರುಗೇಟು ಕೊಟ್ಟ ಮಹಿಳಾವಾದಿಯರೂ ಇದ್ದಾರೆ.

Chairman ಪದದಂತೆಯೇ Housewife ಪದದ ಬಳಕೆಯ ಬಗ್ಗೆಯೂ ಅಮೇರಿಕೆಯ ಮಹಿಳೆಯರಲ್ಲಿ ಅಸಂತುಷ್ಟಿ ಇದೆ. ಸಹಸ್ರಾರು ವರ್ಷಗಳಿಂದ ಮನೆಹೊರಗಿನ ಕೆಲಸವನ್ನು ಗಂಡನೂ, ಮನೆಯೊಳಗಿನ ಕೆಲಸವನ್ನು ಹೆಂಡತಿಯೂ ಮಾಡಿಕೊಂಡು ಬಂದ ಕಾಲದಲ್ಲಿ Housewife ಎನ್ನುವುದು ಸರಿಯಾಗಿದ್ದಿರಬಹುದು. ಆದರೆ ಈಗ

ಪುರುಷನಿಗೆ ಸರಿಸಮಾನಳಾಗಿ ಮಹಿಳೆಯೂ ದುಡಿಯುತ್ತಿರುವುದರಿಂದ ಅಮೇರಿಕೆಯ ಮಹಿಳೆಯರು Housewife ಎಂದು ಹೇಳಿಕೊಳ್ಳಲಿಚ್ಛಿಸದೆ Housemaker ಎಂದು ಹೇಳಿಕೊಳ್ಳಲಾರಂಭಿಸಿದ್ದಾರೆ. ಈ ಮನೋಧರ್ಮವು 'ಗೃಹಿಣೀ' (ನ ಗೃಹಂ ಗೃಹಮಿತ್ಯಾಹುಃ. ಗೃಹಿಣೀ ಗೃಹಮುಚ್ಯತೇ) ಎನ್ನುವ ಭಾರತೀಯ ಸಂಸ್ಕೃತಿಗೆ ಅನುಗುಣವಾಗಿದೆ ಎನಿಸುತ್ತದೆ.

ದೇವರನ್ನು 'ತಂದೆ' ಎಂದು ಏಕೆ ಕರೆಯಬೇಕು 'ತಾಯಿ' ಎಂದು ಏಕೆ ಕರೆಯಬಾರದು ಎಂಬ ವಾದದ ಹಿಂದೆ ಸಾಮಾಜಿಕ ಶೋಷಣೆ ಇದೆಯೇ ಹೊರತು ಆಧ್ಯಾತ್ಮಿಕ ಚಿಂತನೆ ಇಲ್ಲ. ಭಾರತೀಯರ ನಂಬುಗೆಯಲ್ಲಿ ಗಂಡುದೇವರೂ ಇದ್ದಾರೆ, ಹೆಣ್ಣುದೇವರೂ ಇದ್ದಾರೆ. ಗಂಡು ಹೆಣ್ಣಾದ ದೇವರೂ ಇದ್ದಾರೆ. ಗಂಡು-ಹೆಣ್ಣು ಒಂದಾದ ದೇವರೂ ಇದ್ದಾರೆ. ಮದುವೆಯಾದವರೂ ಇದ್ದಾರೆ, ಮದುವೆಯಾಗದವರೂ ಇದ್ದಾರೆ. ಒಬ್ಬರನ್ನಲ್ಲ ಇಬ್ಬರನ್ನು ಮದುವೆಯಾದವರೂ ಇದ್ದಾರೆ, ಯಾರನ್ನೂ ಮದುವೆಯಾಗದೆ ಆಜನ್ಮಬ್ರಹ್ಮಚಾರಿಗಳಾಗಿ ಉಳಿದವರೂ ಇದ್ದಾರೆ. ಹೆಂಡತಿಯನ್ನು ದೂರಮಾಡಿದವರೂ ಇದ್ದಾರೆ, ತಲೆಯ ಮೇಲೆ ಕೂರಿಸಿಕೊಂಡವರೂ ಇದ್ದಾರೆ. ಹೆಂಡತಿಯೊಡನೆ ಜಗಳ ಮಾಡದೆ ಸಾಮರಸ್ಯದಿಂದ ಸಂಸಾರ ಮಾಡಿಕೊಂಡವರೂ ಇದ್ದಾರೆ, ಜಗಳ ಮಾಡಿಕೊಂಡವರೂ ಇದ್ದಾರೆ. ಆದರೆ ವಿವಾಹವಿಚ್ಛೇದನ ಪಡೆದವರು ಮಾತ್ರ ಇದ್ದಂತೆ ತೋರುವುದಿಲ್ಲ! ಇದು ಪುರಾಣಗಳಲ್ಲಿ ಬರುವ ದೇವರುಗಳ ಕಲ್ಪನೆಯಾದರೆ ಪ್ರಸಿದ್ಧವಾದ ಬೃಹದಾರಣ್ಯಕ ಉಪನಿಷತ್ತಿನಲ್ಲಿ ಬರುವ ಮುಂದಿನ ಚಿಂತನೆಯನ್ನು ಗಮನಿಸಿ:

> **ಆತ್ಮೈವೇದಮಗ್ರ ಆಸೀತ್. ಸ ವೈ ನೈವ ರೇಮೇ. ಸ ದ್ವಿತೀಯಮೈಚ್ಛತ್. ಸ ಇಮಮೇವಾತ್ಮಾನಂ ದ್ವೇಧಾ ಅಪಾತಯತ್. ತತಃ ಪತೀ ಚ ಪತ್ನೀ ಚ ಅಭವತಾಮ್. ತಸ್ಮಾದಿದಂ ಅರ್ಧಬೃಗಲಮಿವ ಸ್ವಃ.**

ಇದರ ತಾತ್ಪರ್ಯ ಹೀಗಿದೆ: ಈ ಸೃಷ್ಟಿಯ ಆರಂಭದಲ್ಲಿ ವಿಶ್ವಾತ್ಮ ಒಂದೇ ಒಂದು ಇತ್ತು. ಅದಕ್ಕೆ ಹೆದರಿಕೆ ಉಂಟಾಯಿತು. ನಂತರ ಆಲೋಚಿಸಿದ ಮೇಲೆ ನಾನೊಬ್ಬನೇ ಇರುವಾಗ ಯಾರಿಗಾಗಿ ಹೆದರಬೇಕಾಗಿದೆಯೆಂದು ಸಮಾಧಾನಪಟ್ಟುಕೊಂಡಿತು. ಆದರೆ ಒಂಟಿಯಾದ ಆ ವಿಶ್ವಾತ್ಮನಿಗೆ ತುಂಬಾ ಬೇಸರವಾಯಿತಂತೆ. ತನ್ನ ಬೇಸರವನ್ನು ನಿವಾರಣೆಮಾಡಿಕೊಳ್ಳಲೋಸುಗ ಅದಕ್ಕೆ ಇನ್ನೊಬ್ಬರು ಬೇಕು ಎನಿಸಿತು. ಅದಕ್ಕಾಗಿ ತನ್ನನ್ನೇ ದ್ವಿದಳ ಧಾನ್ಯದಂತೆ ಎರಡು ಭಾಗವನ್ನಾಗಿ ಮಾಡಿಕೊಂಡಿತು. ಆ ಎರಡು ಭಾಗಗಳೇ ಗಂಡ ಮತ್ತು ಹೆಂಡತಿಯಾಗಿ ಈ ಸೃಷ್ಟಿಯ ರಚನೆಯಾಯಿತು. ಇಬ್ಬರಲ್ಲಿ ಯಾರೊಬ್ಬರೂ ಪರಿಪೂರ್ಣರಲ್ಲ. ಇಬ್ಬರೂ ಆ ಪರಿಪೂರ್ಣ ಚೈತನ್ಯದ ಒಂದೊಂದು ಭಾಗ ಮಾತ್ರ. ಬೃಹದಾರಣ್ಯಕೋಪನಿಷತ್ತಿನ ಈ ತಾತ್ವಿಕದರ್ಶನವನ್ನು ಶಿವನ ಅರ್ಧನಾರೀಶ್ವರಲೀಲೆಯಲ್ಲಿಯೂ, 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎನ್ನುವ ದಾಸಿಮಯ್ಯನವರ ವಚನದಲ್ಲಿಯೂ ಕಾಣಬಹುದಾಗಿದೆ. "ಮೊಲೆ-ಮುಡಿ ಬಂದರೆ ಹೆಣ್ಣೆಂಬರು, ಗಡ್ಡ-ಮೀಸೆ ಬಂದರೆ ಗಂಡೆಂಬರು, ಒಳಗೆ ಸುಳಿವಾತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ ಕಾಣಾ ರಾಮನಾಥ" ಎನ್ನುವ ದಾಸಿಮಯ್ಯ ಈ ಸೃಷ್ಟಿಯ ಹಿಂದೆ ಇರುವ ಆ ವಿಶ್ವಾತ್ಮನನ್ನು ಅರ್ಥಪೂರ್ಣವಾಗಿ ಪರಿಚಯಿಸಿದ್ದಾನೆ

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆ ಇತಿಹಾಸದುದ್ದಕ್ಕೂ ತನಗೆ ದೊರೆಯಬೇಕಾದ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಲೇ ಬಂದಿದ್ದಾಳೆ. ಆಕೆಯನ್ನು ಎರಡನೆಯ ದರ್ಜೆಯ ನಾಗರಿಕಳನ್ನಾಗಿ ಸಮಾಜ ನಡೆಸಿಕೊಳ್ಳುತ್ತಲೇ ಬಂದಿದೆ. ಹೆಣ್ಣಿಗೆ ಹಲ್ಲುಗಳ ಸಂಖ್ಯೆ ಕಡಿಮೆ ಎಂದು ಪ್ಲೇಟೋ ನಂಬಿದ್ದನಂತೆ. ಅನೇಕ ಧರ್ಮಗಳಲ್ಲಿ ಹೆಣ್ಣು ಮೋಕ್ಷವನ್ನು ಪಡೆಯುವಂತಿಲ್ಲ, ಅದು ಸಾಧ್ಯವಾಗಬೇಕಾದರೆ ಮುಂದಿನ ಜನ್ಮದಲ್ಲಿ ಅವಳು ಗಂಡಾಗಿ ಹುಟ್ಟಿ ಅದನ್ನು ಸಾಧಿಸಬೇಕು. ಇದು ಅಂದಿನ ಸಮಾಜದಲ್ಲಿ ಹೆಣ್ಣಿಗೆ ಇದ್ದ ಸ್ಥಾನಮಾನದ ದ್ಯೋತಕವೇ ಆಗಿದೆ. ಇಂದು ಮಹಿಳೆಗೆ ದೊರೆತಿರುವ ಕಾನೂನು ರೀತಿಯ ಸಮಾನತೆಯು ಪುರುಷ ನೀಡಿದ ದೇಣಿಗೆಯಲ್ಲ; ಅದು ಆಕೆ ನಿರಂತರ ಹೋರಾಟದಿಂದ ಗಳಿಸಿದ ಫಲ. ಆದರೂ ದಿನನಿತ್ಯ ನಡೆಯುತ್ತಿರುವ ಲಿಂಗ ತಾರತಮ್ಯ, ಕೌಟುಂಬಿಕ ದೌರ್ಜನ್ಯ, ಅಸಹನೆ, ಲೈಂಗಿಕ ಕಿರುಕುಳ ಮೊದಲಾದ ಅಗ್ನಿದಿವ್ಯಗಳನ್ನು ಹೆಜ್ಜೆ ಹೆಜ್ಜೆಗೂ ಹಾಯುತ್ತಲೇ ಆಕೆ ಬದುಕನ್ನು ಕಟ್ಟಿಕೊಳ್ಳಬೇಕಾದ ಅನಿವಾರ್ಯ ಪರಿಸ್ಥಿತಿ ಇಂದಿಗೂ ಇದೆ. ಪುರುಷ ಪ್ರಧಾನ ವ್ಯವಸ್ಥೆಯ ಸ್ವಾರ್ಥದ 'ಕೆರೆಗೆ ಹಾರ'ವಾಗುತ್ತಿರುವ 'ಭಾಗೀರಥಿ'ಯರ ಕಥೆ ಇನ್ನೂ ಮುಗಿದಿಲ್ಲ.

28.4.2011

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑